

ಅರುಣ ಪಿ. ಭಟ್ಟ

## ವಾರಭವಿಷ್ಯ 28.11.2019 ರಿಂದ 4.12.2019




ರಾಜಕೀಯ ಕ್ಷೇತ್ರದಲ್ಲಿ ಇರುವವರಿಗೆ ಪ್ರಗತಿ ಇದೆ. ಹೊಸ ಉದ್ಯೋಗಕ್ಕೆ ನಿರೀಕ್ಷಿತ ಯಶಸ್ಸು ದೊರೆಯುತ್ತದೆ. ವಾರದ ಶುರುವಿನಲ್ಲಿ ಸ್ವಲ್ಪ ಮಟ್ಟಿಗೆ ಆರೋಗ್ಯ ಸಮಸ್ಯೆ ಕಾಡಬಹುದು. ಆಪ್ತರ ಜತೆಗೆ ಬಾಂಧವ್ಯ ಮತ್ತಷ್ಟು ಗಟ್ಟಿಯಾಗಲಿದೆ.

ಶುಭದಿನ 29. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ಆಸ್ತಿ ಖರೀದಿ ಮಾಡುವವರಿಗೆ ಈ ವಾರ ಸೂಕ್ತ. ಕಾನೂನು ವಿಚಾರಗಳಲ್ಲಿ ಅದೃಷ್ಟ ನಿಮ್ಮ ಕಡೆಗೆ ಇರುತ್ತದೆ. ಮಾರಾಟ ಹಾಗೂ ಉತ್ಪಾದನೆ ಕ್ಷೇತ್ರದಲ್ಲಿ ಇರುವವರಿಗೆ ವಾರದ ಆರಂಭದಲ್ಲಿ ಅನುಕೂಲಕರವಾದ ವಾತಾವರಣ ಇರಲಿದೆ.

ಶುಭದಿನ: 1. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ




ವಾರದ ಆರಂಭದಲ್ಲಿ ಶುಭವಾರ್ತೆ. ಆರೋಗ್ಯ ಚೆನ್ನಾಗಿರುತ್ತದೆ. ಉತ್ಸಾಹದಿಂದ ಕಾಣಿಸಿಕೊಳ್ಳುತ್ತೀರಿ. ದೈನಂದಿನ ವ್ಯವಹಾರಗಳಲ್ಲಿ ಶಿಸ್ತು ರೂಢಿಸಿಕೊಳ್ಳಲಿದ್ದೀರಿ. ಯಾವುದೇ ಸನ್ನಿವೇಶವನ್ನು ತಾಳ್ಮೆಯಿಂದ ನಿಭಾಯಿಸಿ.

ಶುಭದಿನ: 3. ವಿಷ್ಣು ಸಹಸ್ರನಾಮ ಪಠಿಸಿರಿ.




ಕಾನೂನು ವ್ಯಾಜ್ಯಗಳಿದ್ದಲ್ಲಿ ನಿಮ್ಮ ಪರವಾಗಿ ಆಗಬಹುದು. ಸ್ಪರ್ಧೆಗಳಲ್ಲಿ ಭಾಗವಹಿಸುವವರಿಗೆ ಯಶಸ್ಸು ಪಡೆಯುವ ಸಾಧ್ಯತೆ ಹೆಚ್ಚಿದೆ. ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ನೀಡಬೇಕು. ಆದರೆ ಕ್ರಮೇಣ ಆರೋಗ್ಯ ಸುಧಾರಿಸುತ್ತಾ ಬರುತ್ತದೆ.

ಶುಭದಿನ: 30. ಆಂಜನೇಯ ಸ್ತೋತ್ರ ಪಠಿಸಿರಿ.




ಹಣಕಾಸು ಸ್ಥಿತಿ ಉತ್ತಮ ಮಾಡಿಕೊಳ್ಳಲು ಹಲವು ಅವಕಾಶ. ಉದ್ಯೋಗಸ್ಥರಿಗೆ ಪರ್ಯಾಯ ಅವಕಾಶಗಳು ದೊರೆಯಲಿವೆ. ಎಲೆಕ್ಟ್ರಾನಿಕ್ ವಸ್ತುಗಳ ಖರೀದಿ ಮಾಡಲಿದ್ದೀರಿ. ವೈವಾಹಿಕ ಜೀವನ ಸಂತುಷ್ಟವಾಗಿರುತ್ತದೆ. ಮೇಲಧಿಕಾರಿಗಳಿಂದ ಮೆಚ್ಚುಗೆ.

ಶುಭದಿನ: 2. ಸೌಂದರ್ಯ ಲಹರಿ ಪಠಿಸಿರಿ.




ವೃತ್ತಿಪರರಿಗೆ ಉತ್ತಮ ಪ್ರಗತಿ ಇದೆ. ನಿಮ್ಮ ಜತೆಗಿರುವವರು ಕೆಲಸದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಾರೆ. ವಾರದ ಮಧ್ಯ ಭಾಗದಲ್ಲಿ ಹಣಕಾಸಿನ ಅನುಕೂಲ. ವಾರದ ಅಂತ್ಯಕ್ಕೆ ಶತ್ರುಗಳು ನಿಮ್ಮನ್ನು ಕೆಳಕ್ಕೆ ದೂಡಲು ಯತ್ನಿಸಬಹುದು.

ಶುಭದಿನ: 3. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ವಾರದ ಆರಂಭದಲ್ಲಿ ಪ್ರಗತಿ. ನಿಮ್ಮ ಶ್ರಮವೇ ಗುರಿಯನ್ನು ನಿರ್ಧರಿಸುತ್ತದೆ. ಮೇಲಧಿಕಾರಿಗಳ ಜತೆಗೆ ಉತ್ತಮ ಬಾಂಧವ್ಯ. ನಿಧಾನವಾಗಿ ಜೀವನಶೈಲಿಯಲ್ಲಿ ಬದಲಾವಣೆ ಕಾಣಿಸಿಕೊಳ್ಳುತ್ತದೆ. ಇದಕ್ಕಾಗಿ ಸಾಲ ಮಾಡುವ ಸಾಧ್ಯತೆಗಳಿವೆ.

ಶುಭದಿನ: 4. ಹನುಮಾನ್ ಚಾಲಿಸ್ ಪಠಿಸಿರಿ.




ದೂರ ಪ್ರಯಾಣ ಮಾಡಬಹುದು. ವೃತ್ತಿ ಬದುಕಿನ ಏಳ್ಗೆಗೆ ಅವಕಾಶ ದೊರೆಯುತ್ತದೆ. ಪ್ರತಿಸ್ಪರ್ಧಿಗಳನ್ನು ಎದುರಿಸಲು ಈ ಹಿಂದಿಗಿಂತ ನಿಮ್ಮ ಸಾಮರ್ಥ್ಯ ಹೆಚ್ಚಾಗಲಿದೆ. ಬಹಳ ಕಾಲದಿಂದ ಬಾಕಿ ಉಳಿದಿದ್ದ ಯೋಜನೆಗಳನ್ನು ಪೂರ್ಣಗೊಳಿಸಲಿದ್ದೀರಿ.

ಶುಭದಿನ; 2. ಈಶ್ವರನಿಗೆ ರುದ್ರಾಭಿಷೇಕ ಮಾಡಿಸಿ.




ಉದ್ಯೋಗ ಬದಲಾವಣೆ ಬಯಸಿದಲ್ಲಿ ವಾರದ ಆರಂಭದಲ್ಲೇ ಶುಭ ವಾರ್ತೆ. ಕಾನೂನು ವ್ಯಾಜ್ಯಗಳು ಎದುರಿಸುತ್ತಿದ್ದಲ್ಲಿ ವಿರೋಧಿಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಆರೋಗ್ಯದಲ್ಲಿ ಸಣ್ಣ ಪುಟ್ಟ ಏರಿಳಿತ ಕಾಣಿಸಿಕೊಳ್ಳಬಹುದು.

ಶುಭದಿನ: 2. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ವೃತ್ತಿಪರ ಕಾರಣಗಳಿಗೆ ಅಥವಾ ಉನ್ನತ ವಿದ್ಯಾಭ್ಯಾಸಕ್ಕಾಗಿ ಸ್ಥಳಾಂತರ ಆಗುವ ಸಾಧ್ಯತೆಗಳಿವೆ. ಅಲರ್ಜಿ ಇರುವವರು ಬಹಳ ಎಚ್ಚರಿಕೆಯಿಂದ ಇರಬೇಕು. ಮುಂಚಿನ ಉತ್ಸಾಹದಿಂದ ಕಾರ್ಯ ನಿರ್ವಹಿಸುವುದು ಕಷ್ಟವಾಗುತ್ತದೆ.

ಶುಭದಿನ: 30. ರಾಘವೇಂದ್ರ ಸ್ವಾಮಿಗಳ ಆರಾಧನೆ ಮಾಡಿರಿ.




ವಾರದ ಆರಂಭದಲ್ಲಿ ಮಕ್ಕಳಿಂದ ನಿಮಗೆ ಶುಭ ಸುದ್ದಿ ಇದೆ. ವೈಯಕ್ತಿಕ ಸಂಬಂಧವು ಸೌಹಾರ್ದಯುತವಾಗಿ ಇರುತ್ತದೆ. ವಾರದ ಮಧ್ಯ ಭಾಗದಲ್ಲಿ ಪ್ರೀತಿಪಾತ್ರರಿಗೆ ಮತ್ತಷ್ಟು ಹತ್ತಿರವಾಗುತ್ತೀರಿ. ಆಸ್ತಿ ವ್ಯವಹಾರದಿಂದ ಲಾಭ.

ಶುಭದಿನ: 2. ಗೋಪೂಜೆ ಮಾಡಿ. ಶಿವಕವಚ ಪಠಿಸಿರಿ.




ವೈಯಕ್ತಿಕ ಹಾಗೂ ವೃತ್ತಿಪರ ಬದುಕಿನಲ್ಲಿ ಲಾಭ ಹಾಗೂ ಮಹತ್ತರವಾದ ಪ್ರಗತಿ. ಮನೆಗೆ ಎಲೆಕ್ಟ್ರಾನಿಕ್ ವಸ್ತುಗಳ ಖರೀದಿ ಮಾಡಲಿದ್ದೀರಿ. ಸಿನಿಮಾ, ವೈದ್ಯಕೀಯ, ಕಲೆ ಈ ರೀತಿಯ ವೃತ್ತಿಯಲ್ಲಿ ಇರುವವರಿಗೆ ಅತ್ಯುತ್ತಮವಾದ ಲಾಭ ಇದೆ.

ಶುಭದಿನ: 1. ದೇವ್ಯಪರಾದ ಕ್ಷಮಾಪನಾ ಸ್ತೋತ್ರ ಪಠಿಸಿರಿ.

